# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಎಂವೈಎಸ್/1658–2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 10/12/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಡಾ: ಪಿ.ಪುಟ್ಟಸ್ವಾಮಿ, ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಅಸ್ಥಿ ಚಿಕಿತ್ಸಾ–ವಿಭಾಗ, ವೈದ್ಯಕೀಯ ವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಮೈಸೂರು,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಮೈಸೂರು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಡಾ: ಪಿ.ಪುಟ್ಟಸ್ವಾಮಿ, ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಅಸ್ಥಿ ಚಿಕಿತ್ಸಾ–ವಿಭಾಗ, ವೈದ್ಯಕೀಯ ವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಮೈಸೂರು,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಎಸ್.ಆರ್.ದೇವರಾಜು, ಬಿನ್ ಲೇ: ಎಸ್.ರಾಜು, ನಂ: 262, ಸಾಯಿಬಾಬ ಮುಖ್ಯ ರಸ್ತೆ, ಹನುಮಯ್ಯ ಲೇಔಟ್, ಕೊಡಿಗೇಹಳ್ಳಿ, ಬೆಂಗಳೂರು.**(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :–**

i) ದೂರುದಾರರು ಎದುರುದಾರರ ವಿರುದ್ಧ ದೂರು ಸಲ್ಲಿಸಿದ್ದು, ದೂರಿನಲ್ಲಿ ದೂರುದಾರರ ಸಂಬಂಧಿಕ ಶ್ರೀ ಶಿವಕುಮಾರ, ಇವರು ರಸ್ತೆ ಅಪಘಾತದ ಸಂಬಂಧವಾಗಿ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಿ: 1–4–2017 ರಂದು ದಾಖಲಾಗಿದ್ದು, ಅವರಿಗೆ ಸೂಕ್ತ ಚಿಕಿತ್ಸೆ ನೀಡದೆ ಆಪರೇಷನ್ ಮಾಡದೆ ಬರೀ ಔಷಧಿಗಳನ್ನು ನೀಡುತ್ತಿದ್ದರಿಂದ, ದೂರುದಾರರು ಎದುರುದಾರರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದಾಗ, ಎದುರುದಾರರು ದೂರುದಾರರಿಗೆ ಪ್ರೈವೇಟ್ ಕ್ಲಿನಿಕ್‌ಗೆ ಬರುವಂತೆ ಸೂಚಿಸಿದ್ದು, ಅದರಂತೆ ದೂರುದಾರರು ದಿ: 8–4–2017 ರಂದು ಕ್ಲಿನಿಕ್‌ನಲ್ಲಿ

ಭೇಟಿಯಾದಾಗ, ಎದುರುದಾರರು ಗಾಯಾಳು ಶ್ರೀ ಶಿವಕುಮಾರ್ ರವರಿಗೆ ಆಪರೇಷನ್‌ಗೆ ರೂ.40,000/- ಗಳು ಆಗುತ್ತದೆ ಹಾಗೂ ಎಂ.ವಿ.ಸಿ ಕೇಸ್‌ನ್ನು ನಿಮ್ಮ ಪರಿಚಯದ ನಾಗಭೂಷನ್, ಲಾಯರ್ ರವರಿಗೆ ಕೊಡಬೇಕೆಂದು ಒತ್ತಾಯಿಸಿರುತ್ತಾರೆ. ದೂರುದಾರರು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದಾಗ, ಎದುರುದಾರರು 28,000/- ರೂ.ಗಳನ್ನು ಕೊಡಲೇಬೇಕು ಎಂದು ಹೇಳಿ ಅದೇ ದಿನ 2000/- ರೂ.ಗಳನ್ನು ದೂರುದಾರರಿಂದ ಪಡೆದು ಉಳಿಕೆ 26000/- ರೂ.ಗಳಿಗೆ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಪ್ರಯುಕ್ತ ದಿನಾಂಕ: 12-4-2017 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಮೈಸೂರು, ಅಲ್ಲಿಗೆ ಹಾಜರಾಗಿ ಎದುರುದಾರರಾದ ನೀವು 26000/-ರೂ.ಗಳಿಗೆ ಲಂಚ ಕೇಳಿ ಬಗ್ಗೆ ದೂರು ದಾಖಲಿಸಿದ್ದು, ಸದರಿ ಮೊ.ಸಂಖ್ಯೆ: 05/2017 ರಲ್ಲಿ ಕಲಂ 7 13(1)(ಡಿ)ಸ/ವಾ 13(2) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ii) ದಿನಾಂಕ: 12-4-2017 ರಂದು ತನಿಖಾಧಿಕಾರಿಯವರು ಪಂಚರಾದ ಟಿ.ಸಿ.ನಾಗರಾಜು ಪಂಚ-1, ಹೆಚ್.ಸಿ.ಮಂಜುನಾಥ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ (ಡಿನಾಮಿನೇಷನ್ : 2000 x 12, 500 x 4) 26000/- ರೂ. ಗಳನ್ನು ಹಾಜರುಪಡಿಸಿದ್ದು, ಸದರಿ ಹಣದ ಮೌಲ್ಯ ಮತ್ತು ನಂಬರುಗಳನ್ನು ಪಂಚರು ಪರಿಶೀಲಿಸಿದ್ದು, ಪಂಚ-2 ಪ್ರತ್ಯೇಕ ಹಾಳೆಯಲ್ಲಿ ಹಣದ ಮೌಲ್ಯ ಮತ್ತು ನಂಬರುಗಳನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-1 ಟಿ.ಸಿ.ನಾಗರಾಜು ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ ದೂರುದಾರರ ಧರಿಸಿದ ಶರ್ಟಿನ ಮೇಲ್ಭಾಗದ ಎಡ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದ ನಂತರ, ದೂರುದಾರರು ತನ್ನ ತಲೆಗೆ ಧರಿಸಿದ ಕ್ಯಾಪ್‌ನ್ನು ತೆಗೆದು ಮತ್ತೆ ಧರಿಸಿಕೊಳ್ಳುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ದೂರುದಾರರ ಜೊತೆ ಪಂಚ-2 ಹೆಚ್.ಸಿ.ಮಂಜುನಾಥ ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ ಹಾಗೂ ತನಿಖಾಧಿಕಾರಿ ದೂರುದಾರರಿಗೆ ಒಂದು ಡಿಜಿಟಲ್ ವಾಯ್ಸ್ ರೆಕಾರ್ಡ್‌ರ್ ನೀಡಿ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿ: 12/4/2017 ರಂದು ಮ: 2.10 ರಿಂದ 3.00 ಗಂಟೆಯವರೆಗೆ ಪಂಚರ ಸಮಕ್ಷಮ ಮಾಡಿರುತ್ತಾರೆ.

iii) ಅದೇ ದಿನ ಅಂದರೆ, ದಿನಾಂಕ: 12-4-2017 ರಂದು ದೂರುದಾರರು, ನೆರಳು ಸಾಕ್ಷಿ ಪಂಚ-2 ರವರೊಂದಿಗೆ ಎದುರುದಾರರ ನರ್ಸಿಂಗ್ ಹೋಂ ಒಳಗೆ ಬಂದಾಗ, ಎಕ್ಸ್‌ರೇ ಕೊಠಡಿಯಲ್ಲಿ ಇದ್ದ ಎದುರುದಾರರು ದೂರುದಾರರನ್ನು ನೋಡಿ ಬರಲು ಹೇಳಿ, ದೂರುದಾರರು ಒಳಗೆ ಬಂದ ಮೇಲೆ ಅಮೌಂಟ್ ರೆಡಿಯಾಗಿದೆ ಎಂದು ಕೇಳಿದಾಗ, ಅದಕ್ಕೆ ದೂರುದಾರರು ಇವತ್ತು ಅಡ್ಜೆಸ್ಟ್ ಆಯಿತು ಎಂದು ಹೇಳಿದ ನಂತರ, ಎದುರುದಾರರು ಮುಂದಿನ ವಾರದಲ್ಲಿ ಆಪರೇಷನ್ ಮಾಡುತ್ತೇನೆ ಅಮೌಂಟ್ ಆಗಿದ್ದರೆ ಕೊಡಿ ಎಂದು ಒತ್ತಾಯಿಸಿದಾಗ, ದೂರುದಾರರು ತಮ್ಮ ಬಳಿ ಇದ್ದ ಪಿನಾಪ್ತಿಲಿನ್ ಫೌಡರ್ ಲೇಪಿತ ರೂ.26,000/- ಗಳನ್ನು ಕೊಟ್ಟಾಗ ಎದುರುದಾರರು ಬಲಗೈಯಿಂದ ಪಡೆದು ಎರಡು ಕೈಗಳಿಂದ ಎಣಿಸಿ, ತನ್ನ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ನಿಗದಿತ ಸೂಚನೆಯನ್ನು ತನಿಖಾಧಿಕಾರಿಗೆ ನೀಡಿರುತ್ತಾರೆ. ನಂತರ ಸೂಚನೆಯನ್ನು ಪಡೆದ ತನಿಖಾಧಿಕಾರಿಯವರು, ಪುಟ್ಟಸ್ವಾಮಿ ಡಯಾಗ್ನೋಸ್ಟಿಕ್ ಸೆಂಟರ್ ಮತ್ತು ನರ್ಸಿಂಗ್ ಹೋಂಗೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿದ ಮೇರೆಗೆ, ತನಿಖಾಧಿಕಾರಿಯವರು ತನ್ನನ್ನು ಎದುರುದಾರರಿಗೆ ಪರಿಚಯಿಸಿಕೊಂಡು, ಅವರ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ವಿಚಾರಣೆ ಮಾಡಿರುತ್ತಾರೆ. ತನಿಖಾಧಿಕಾರಿಯರ ಸೂಚನೆ ಮೇರೆಗೆ ಪೊಲೀಸ್ ಸಿಬ್ಬಂದಿ ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆಸಿದಾಗ, ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ ಹಾಗೂ ದೂರುದಾರರಿಂದ ಪಡೆದುಕೊಂಡ ಲಂಚದ ಹಣ 26000/- ರೂ.ಗಳನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ತಾನು ಧರಿಸಿದ ಪ್ಯಾಂಟಿನ ಬಲಭಾಗದ ಜೇಬಿನಿಂದ ಲಂಚದ ಹಣವನ್ನು ತೆಗೆದು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿ ಸೂಚನೆ ಮೇರೆಗೆ, ಪಂಚರು ಸದರಿ ಲಂಚದ ಹಣದ ಮೌಲ್ಯ ಮತ್ತು ನಂಬರನ್ನು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಹಾಗೂ ತನಿಖಾಧಿಕಾರಿಯ ಸೂಚನೆ ಮೇರೆಗೆ ಪೊಲೀಸ್ ಸಿಬ್ಬಂದಿ, ಎದುರುದಾರರ ಪ್ಯಾಂಟಿನ ಬಲಭಾಗದ ಜೇಬಿನ ಒಳಬದಿಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ ತನಿಖಾಧಿಕಾರಿ ಪ್ಯಾಂಟ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ . ನಂತರ ತನಿಖಾಧಿಕಾರಿಯವರು ಟ್ರ್ಯಾಪ್ ವೇಳೆಯಲ್ಲಿ ದೂರುದಾರರು ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಯು ದೂರುದಾರರ ಬಳಿಯಿದ್ದ ಡಿಜಿಟಲ್ ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಾಗಿದ್ದು, ಅದನ್ನು ಸಿ.ಡಿಗೆ ವರ್ಗಾಯಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ದೂರುದಾರರಿಂದ ಪಡೆದ ಲಂಚದ ಹಣ ಬಗ್ಗೆ ಸಮಜಾಯಿಷಿಕೆ ಕೇಳಿದಾಗ, ಎದುರುದಾರರು ತಮ್ಮ ಸಮಜಾಯಿಷಿಕೆಯಲ್ಲಿ ... "ಈ ದಿನ ಅಂದರೆ 12-04-2017 ರಂದು ಬೆಳಿಗ್ಗೆಯಿಂದ ಮದ್ಯಾಹ್ನದವರೆಗೆ ಕೆ.ಆರ್.ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಳನ್ನು ನಡೆಸಿರುತ್ತೇನೆ. ಸದರಿ ದೂರುದಾರರ ಸಂಬಂಧಿ ಶಿವಕುಮಾರ್ ರವರು ಈ ತಿಂಗಳ ಮೊದಲು ವಾರದಲ್ಲಿ ರಸ್ತೆ ಅಪಘಾತದಿಂದ ಗಾಯಗೊಂಡು ನಮ್ಮ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಸದರಿಯವರ ಎಡಗಾಲಿಗೆ

ಬಲವಾದ ಪೆಟ್ಟಾಗಿದ್ದು ಚರ್ಮದಲ್ಲಿ ಗುಳ್ಳೆಗಳು ಬಂದಿದ್ದು ಮೂಳೆಗಳು ಮುರಿದಿರುತ್ತದೆ. ಇವರಿಗೆ ಎಲ್ಲಾ ತರಹದ ಪರೀಕ್ಷೆಗಳನ್ನು ಮಾಡಿಸಿದ್ದು ಅವರಿಗೆ ಶಸ್ತ್ರ ಚಿಕಿತ್ಸೆ ನಡೆಸಲು ಚರ್ಮವು ಹದವಾಗಿರದೆ ಕಾರಣ ಅವರಿಗೆ ಈ ದಿನ ಶಸ್ತ್ರ ಚಿಕಿತ್ಸೆ ಮಾಡಲು ಆಗಿರುವುದಿಲ್ಲ. ಸದರಿ ರೋಗಿಯ ಸಂಬಂಧಿಕರು ನನ್ನ ವಿರುದ್ಧ ದೂರು ತಮಗೆ ಸಲ್ಲಿಸಿರುತ್ತಾರೆ. ಅವರು ನನ್ನ ಮಗನ ನರ್ಸಿಂಗ್ ಹೋಂನಲ್ಲಿ ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಬಂದು ಬಲವಂತವಾಗಿ ಹಣವನ್ನು ನನ್ನ ಜೇಬಿಗೆ ತುರುಕಿರುತ್ತಾರೆ ಹಣ ತುರುಕುವ ಸಮಯದಲ್ಲಿ ಬೇಡವೆಂದು ಅಸಹಕಾರ ಮಾಡುವ ಸಂದರ್ಭದಲ್ಲಿ ನನ್ನ ಕೈ ಹಣಕ್ಕೆ ತಗುಲಿರುತ್ತದೆ. ನಂತರ ತಕ್ಷಣ ನನ್ನ ಕೈ ಅನ್ನು ತಡೆದಿರುತ್ತಾರೆ. ಸದರಿ ದೂರುದಾರರು ನನ್ನ ಸಲಹಾ ಕೊಠಡಿಯಿಂದ ಓಡಿರುತ್ತಾರೆ. ನಾನು ಹಣ ವಾಪಸ್ ಮಾಡಲು ಅಥವಾ ಅವರಿಗೆ ವಾಪಸ್ ಮಾಡುವ ಪ್ರಯತ್ನದ ಮುನ್ನವೇ ನನ್ನ ಕೈಗಳನ್ನು ಹಿಡಿದಿರುತ್ತಾರೆ. ನಾನು ಯಾವುದೇ ರೀತಿಯ ತೊಂದರೆಯನ್ನು ರೋಗಿಗೆ ಕೊಟ್ಟಿರುವುದಿಲ್ಲ. ವೈದ್ಯಕೀಯ ಕಾರಣಗಳಿಂದ ಅವರನ್ನು ಈ ದಿನದ ಶಸ್ತ್ರ ಚಿಕಿತ್ಸಾ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ. ಮತ್ತು ಸಲಕರಣೆಗಳನ್ನು ಅವರು ಒದಗಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಶಸ್ತ್ರ ಚಿಕಿತ್ಸಾ ನಡೆಸಿರುವುದಿಲ್ಲ" ಎಂದು ಹೇಳಿರುತ್ತಾರೆ ನಂತರ ತನಿಖಾಧಿಕಾರಿ ಎದುರುದಾರರ ಸಮಜಾಯಿಷಿಕೆ ಕುರಿತು ದೂರುದಾರರ ಅಭಿಪ್ರಾಯ ಕೇಳಲಾಗಿ, ಎದುರುದಾರರು ನೀಡಿರುವ ಸಮಜಾಯಿಷಿಕೆ ಸುಳ್ಳು ಎಂದು ದೂರುದಾರರು ಹೇಳಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ನಿಮ್ಮನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ಟ್ರ್ಯಾಪ್ ಮಹಜರನ್ನು ದಿ: 12/4/2017 ರಂದು ರಾ: 8.15 ರಿಂದ ರಾ: 11.30 ಗಂಟೆಯವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

iv). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಮಾದರಿ ಧ್ವನಿ ಹೋಲಿಕೆ ಇರುವ ಬಗ್ಗೆ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಪಡೆದಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

v). ಗೌರವಾನ್ವಿತರ ಆದೇಶದ ಅನ್ವಯ ಎದುರುದಾರರಿಗೆ ದಿ: 31/08/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 26/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ದೂರುದಾರರು ತನ್ನ ವಿರುದ್ಧ ಸುಳ್ಳು ದೂರನ್ನು ಎ.ಸಿ.ಬಿ ಠಾಣೆಗೆ ನೀಡಿರುತ್ತಾರೆ. ತಾನು ಯಾವುದೇ ಲಂಚದ ಹಣವನ್ನು ಕೇಳಿಲ್ಲ ಮತ್ತು ಪಡೆದಿಲ್ಲ. ಆದರೆ, ಗಾಯಾಳು ಶಿವಕುಮಾರ್ ರವರಿಗೆ ಅಪಘಾತದಿಂದ ಅವರ ಎಡಗಾಲಿಗೆ ತೀವ್ರ ಸ್ವರೂಪದ ಗಾಯ ಉಂಟಾಗಿದ್ದು, ಚಿಕಿತ್ಸೆಗಾಗಿ ಕೆ.ಆರ್.ಎಸ್. ಆಸ್ಪತ್ರೆಗೆ

ದಾಖಲಾಗಿದ್ದಾರೆಂದು ಒಪ್ಪಿಕೊಂಡಿರುತ್ತಾರೆ. ಗಾಯಳು ಶಿವಕುಮಾರ್ ರವರ ಸಂಬಂಧಿಕ ಎಸ್.ಆರ್.ದೇವರಾಜ್ ಎಂಬುವರು ಆಸ್ಪತ್ರೆಯಲ್ಲಿ ನನ್ನನ್ನು ಭೇಟಿಯಾಗಿರುವುದಿಲ್ಲ ಹಾಗೂ ಅವರು ಆಸ್ಪತ್ರೆಗೆ ಬಂದು ಶಿವಕುಮಾರ್ ಬಗ್ಗೆ ವಿಚಾರಿಸಿಲ್ಲ, ದೂರುದಾರರಿಂದ ತಾನು ಲಂಚದ ಹಣ 40,000/- ರೂ. ಗಳನ್ನು ಗಾಯಾಳು ಶಿವಕುಮಾರ್ ರವರಿಗೆ ಶಸ್ತ್ರ ಚಿಕಿತ್ಸೆ ಮಾಡಲು ಕೇಳಿಲ್ಲ ಹಾಗೂ ಪಡೆದಿಲ್ಲ ಮತ್ತು ಎಂ.ವಿ.ಸಿ. ಪ್ರಕರಣವನ್ನು ನಾಗಬೂಷಣ್ ವಕೀಲರಿಗೆ ಕೊಡಲು ಹೇಳಿರುವುದಿಲ್ಲ ಎಂದು ಹೇಳಿರುತ್ತಾರೆ. ಎದುರುದಾರರು ತಾನು ನಾನ್ ಪ್ರಾಕ್ಟೀಸೀಂಗ್ ಅಲೋಯೆನ್ಸ್ ಪಡೆದಿರುವುದಿಲ್ಲ. ದೂರುದಾರರ ಸುಳ್ಳು ದೂರಿನ ಮೇಲೆ ತನಿಖಾಧಿಕಾರಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ತನಿಖಾಧಿಕಾರಿ ಮಾಡಿರುವ ಪ್ರಾಯೋಗಿಕ ಪಂಚನಾಮೆ ಹಾಗೂ ಟ್ರ್ಯಾಪ್ ಪಂಚನಾಮೆ ಪ್ರಕ್ರಿಯೆಗಳು ಸತ್ಯಾಂಶದಿಂದ ಕೂಡಿರುವುದಿಲ್ಲ. ಎಫ್ಎಸ್ಎಲ್ ವರದಿಯು ಕೂಡ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತಾರೆ. ದೂರುದಾರರಿಂದ 26,000/- ರೂ.ಗಳ ಲಂಚದ ಹಣವನ್ನು ಕೇಳಿರುವುದಿಲ್ಲ ಹಾಗೂ ಪಡೆದಿರುವುದಿಲ್ಲ. ಪರಿವೀಕ್ಷಣಾ ಟಿಪ್ಪಣಿಯಲ್ಲಿ ಆಪಾದಿಸಿರುವಂತೆ ಯಾವುದೇ ಕರ್ತವ್ಯ ಲೋಪ ಮಾಡಿರುವುದಿಲ್ಲವೆಂದು ಪ್ರಕರಣವನ್ನು ಕೈಬಿಡುವಂತೆ ಕೋರಿರುತ್ತಾರೆ. ಎದುರುದಾರರು ನೀಡಿರುವ ಪ್ರತ್ಯುತ್ತರವನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಎದುರುದಾರರನ್ನು ವಿಚಾರಣೆ ಮಾಡದೇ ಇರಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/12/24

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು